# ಶಿರಗಾನಹಳ್ಳಿ ಶಾಂತನಾಯ್ಕರವರ 'ತಾಂಡ' ಕಾದಂಬರಿಯ ಕಾಯಕಯೋಗಿಗಳು

**ಸೋಮಶೇಖರ ಎಂ.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೋಕ, ಬಳ್ಳಾರಿ ಜಿಲ್ಲೆ.

DOI: https://doi.org/10.5281/zenodo.17221718

## ABSTRACT:

'ತಾಂಡ' ಶಿರಗಾನಹಳ್ಳಿ ಶಾಂತನಾಯ್ಕ ಅವರು ಬರೆದಿರುವ ಕಾದಂಬರಿ. ಶೀರ್ಷಿಕೆಯೇ ಸೂಚಿಸುವಂತೆ ಲಂಬಾಣಿ ಸಮುದಾಯದ ಸಂಸ್ಕೃತಿ ಹಾಗೂ ಜನರ ಬದುಕುಬವಣೆಗಳು ಇಲ್ಲಿನ ಕಥಾವಸ್ತು. ಪರಂಪರೆ ಮತ್ತು ಜಾಗತೀಕರಣಗಳ ನಡುವೆ ನಡೆಯುವ ಇಲ್ಲಿನ ಕಥನವು ಲಂಬಾಣಿ ಸಮುದಾಯದ ಆಂತರ್ಯದ ಸಂಗತಿಗಳನ್ನು ತೆರೆದಿಟ್ಟಿದೆ. ಅಷ್ಟೇ ಅಲ್ಲದೆ, ಆ ಕುರಿತ ಚರ್ಚೆಗಳು ಹಲವು ಆಯಾಮಗಳಲ್ಲಿ ಕಾಣಿಸಿಕೊಂಡಿವೆ. ಅವುಗಳು ಸಂಸ್ಕೃತೀಕರಣಗೊಂಡು ಒಂದು ಜನಾಂಗದ ಸುತ್ತಲೂ ಹೆಣೆದುಕೊಂಡಿದ್ದರೂ ಅದರಾಚೆಗೂ ವಿಸ್ತರಿಸಿವೆ. ಲಂಬಾಣಿ ಸಮುದಾಯದ ಜೊತೆಗೆ ಇತರೆ ಸಮುದಾಯದ ಬದುಕು, ಕಾಯಕಗಳು ತಳುಕು ಹಾಕಿಕೊಂಡಿವೆ. ವ್ಯಾಪಾರವ್ಯವಹಾರಗಳು, ದುಡಿಮೆಶ್ರಮಗಳು, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ವಿಚಾರಗಳು ವಿಭಿನ್ನ ನೆಲೆಗಳಲ್ಲಿ ಹರಡಿಕೊಂಡಿವೆ. ಹನ್ನೆರಡನೇ ಶತಮಾನದ ಶಿವಶರಣರ ಕಾಯಕ ತತ್ವದ ಪ್ರಭಾವ ಮತ್ತು ಪ್ರೇರಣೆ ಕನ್ನಡ ನೆಲದಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬರಲ್ಲಿಯೂ ಮೈಗೂಡಿಕೊಂಡಿದೆ ಎಂಬ ಮಾತಿಗೆ ನಿದರ್ಶನವೆಂಬಂತೆ ಈ ಕಾದಂಬರಿ ಪ್ರಸ್ತುತಗೊಳಿಸಿದೆ.

## KEYWORDS:

ಭದ್ರನಾಯ್ಕನ ತಾಂಡ, ಹುಲಿಯೂರನ ಪಾತ್ರ, ಹನುಮಜ್ಜ, ಭೀಮಣ್ಣ, ರಾಮಾಯಣ, ಮಹಾಭಾರತ.

**'ತಾಂಡ' ಕಾದಂಬರಿಯ ಹೂರಣ:**

'ತಾಂಡ' ಕಾದಂಬರಿ ಲಂಬಾಣಿ ಸಂಸ್ಕೃತಿ ಮತ್ತು ಸಂಪ್ರದಾಯದ ಹಿನ್ನೆಲೆಯಲ್ಲಿ ರಚನೆಯಾಗಿದೆ. ಇಲ್ಲಿ ಲಂಬಾಣಿ ಸಮುದಾಯದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಬದುಕಿನ ಏಳುಬೀಳುಗಳು ದಾಖಲಾಗಿವೆ. ಕಾದಂಬರಿಕಾರರು ಮೂಲತಃ ಲಂಬಾಣಿ ಸಮುದಾಯದವರೇ ಆಗಿರುವುದರಿಂದ ದಾಖಲಿಸಿರುವ ಎಲ್ಲಾ ಘಟನೆಗಳು, ವಿಚಾರಗಳು ಅವರ ವೈಯಕ್ತಿಕ ಬದುಕಿಗೆ ಹತ್ತಿರವಾದಂತವುಗಳೆಂದು ಭಾವಿಸಬಹುದು. ಆದರೆ ಕಾದಂಬರಿಯಲ್ಲಿ ದಾಖಲಾದ "ಯಾವುದೇ ತಾಂಡದ ಕತೆ, ಘಟನೆ, ಸನ್ನಿವೇಶ, ಪಾತ್ರಗಳು ಇಲ್ಲಿ ಪ್ರಸ್ತುತವಾಗಿರುವುದಿಲ್ಲ" ಎಂಬುದು ಕಾದಂಬರಿಕಾರರ ಕಲ್ಪನೆಗೆ ಒತ್ತು ಕೊಟ್ಟಿದೆ. ಕಾದಂಬರಿ ಬರೆಯುವ ಪ್ರತಿಯೊಬ್ಬನೂ ಕಥೆಯ ಆಳಅಗಲಗಳ ಬಗೆಗೆ ಹೇಳುವಾಗ ಅವುಗಳ ಭೂತವರ್ತಮಾನಭವಿಷ್ಯದ ಕುರಿತು ಸಮಗ್ರವಾಗಿ ಅರಿತುಕೊಂಡು ಚರ್ಚೆಗೆ ಅಣಿಯಾಗುತ್ತಾನೆ. ಇಲ್ಲಿ ದಾಖಲು ಮಾಡಿರುವ ವಿಚಾರಗಳು ಕಲ್ಪನೆಗಿಂತಲೂ ವಾಸ್ತವದಿಂದ ಕೂಡಿರುವಂತೆ ಭಾಸವಾಗುತ್ತವೆ. ಕಾದಂಬರಿಯಲ್ಲಿ ಬರುವ ಪಾತ್ರಗಳು, ಪ್ರಸಂಗಗಳು ಕೇವಲ ಕಾಲ್ಪನಿಕ. ಹಾಗೇನಾದರೂ ಕಂಡು ಬಂದರೆ ಅದೊಂದು 'ಆಕಸ್ಮಿಕ' ಎಂದು ಹೇಳಿರುವ ಕಾದಂಬರಿಕಾರನ ನುಡಿ ಓದುಗರ ಆಶ್ಚರ್ಯಕ್ಕೆ ಕಾರಣವಾಗಿದೆ. ಹಾಗಾದರೆ ಯಾವುದು ಸತ್ಯ? ಯಾವುದು ಪ್ರಸ್ತುತ? ಯಾವುದು ಮೂರ್ತ? ಯಾವುದು ಅಮೂರ್ತ? ಇವುಗಳ ಜಿಜ್ಞಾಸೆ ಕೃತಿಕಾರನಿಗೆ ಕಾಡಿದಂತಿದೆ. ಅದಕ್ಕಾಗಿಯೇ ಅವರು ಇಲ್ಲಿ ಹೇಳಿರುವ ವಿಚಾರಗಳು ಯಾವುದೇ ವ್ಯಕ್ತಿ, ಸಮುದಾಯ, ಪ್ರದೇಶ, ಸನ್ನಿವೇಶಗಳಿಗೆ ಸಂಬಂಧಿಸಿದ್ದಲ್ಲ. ಇದೊಂದು ಕಾಲ್ಪನಿಕ ಎಂದು ಕಥೆಯನ್ನು ನಿರೂಪಿಸಲು ಹೊರಟಂತಿದೆ. ತಾಂಡಗಳೊಂದಿಗೆ ಸಂಪರ್ಕವಿರುವವರು, ಸಂಬಂಧಗಳನ್ನು ಬೆಳೆಸಿಕೊಂಡಿರುವವರಿಗೆ ಕಾದಂಬರಿಯ ಓದು ಲಂಬಾಣಿಗರ ಜೀವನ ಪದ್ಧತಿಗಳನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಿದೆ. ಅದೇನೆ ಇರಲಿ ಈ ಕಾದಂಬರಿಯು ಒಂದು ಸಮುದಾಯದ ಸಮಗ್ರ ಬದುಕನ್ನು ಚಿತ್ರಿಸಿಕೊಟ್ಟಿದೆ. ಇದು ಕಾದಂಬರಿಕಾರನ ವಿದ್ವತ್ತಿಗೆ ಮತ್ತು ಬಹುತ್ವಕ್ಕೆ ನಿದರ್ಶನವಾಗಿದೆ.

ಭದ್ರನಾಯ್ಕನ ತಾಂಡದ ಮೂಲಕ ಪ್ರಾರಂಭಗೊಳ್ಳುವ ಕಾದಂಬರಿಯು ವಿಶ್ವದ ಎಲ್ಲಾ ಲಂಬಾಣಿಗರ ನೆಲೆಯ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತದೆ. ಇಲ್ಲಿನ ಜನಸಮುದಾಯವು ಸಮಗ್ರ ಲಂಬಾಣಿ ಸಮುದಾಯವನ್ನು ತನ್ನೊಡಲೊಳಗೆ ಆವಿರ್ಭವಿಸಿಕೊಂಡು; 'ಹುಲಿಯೂರ' ಪಾತ್ರದ ಮೂಲಕ ಕಾದಂಬರಿಯ ನಿರೂಪಣೆಗೆ ಮುಂದಾಗಿದೆ. ಈ ಪಾತ್ರವು ಓದುಗರಿಗೆ ಒಬ್ಬ ವ್ಯಕ್ತಿಯಾಗಿ ಕಾಣುವುದಷ್ಟೇ ಅಲ್ಲದೇ ಲಂಬಾಣಿ ಸಂಸ್ಕೃತಿಯ ಪರಂಪರೆ ಹಾಗೂ ಪಲ್ಲಟಗಳಿಗೆ ಸಾಕ್ಷಿಯಾಗಿಯೂ ಕಾಣಿಸಿಕೊಳ್ಳುತ್ತದೆ. "ಹುಲಿಯೂರ ಬಹಳ ಸೂಕ್ಷ್ಮ ಸಂವೇದಿ. ತನ್ನ ನೆನಪಿನ ಕಣಜದಲ್ಲಿ ಹಾಗೆ ಕಾಪಿಟ್ಟಿದ್ದ ಸಾವಿರಾರು ಘಟನೆಗಳನ್ನು ಒಂದೊಂದಾಗಿ ರಾಸುಗಳು

ದಿನವಿಡೀ ಹುಲ್ಲು ತಿಂದು ರಾತ್ರಿ ಮೆಲಕು ಹಾಕುವಂತೆ ಮೆಲಕು ಹಾಕುತ್ತಿದ್ದ" ಎಂದು ಕಾದಂಬರಿಕಾರರು ಹೇಳುವುದರಲ್ಲಿ ಇಡೀ ಕಾದಂಬರಿಯ ಕಥಾವಸ್ತು ಹುದುಗಿದೆ. ಅಂದರೆ ಇಡೀ ಲಂಬಾಣಿ ಸಮುದಾಯದ ಗತಕಾಲದ ಜನಜೀವನ, ಮದುವೆ, ಹಬ್ಬಹರಿದಿನಗಳು, ಆಟಗಳು, ನೃತ್ಯಹಾಡು ಹೀಗೆ ವೈವಿಧ್ಯಮಯ ವರ್ಣರಂಜಿತ ಬದುಕನ್ನು ಕಟ್ಟಿಕೊಡುತ್ತಾ ವರ್ತಮಾನದ ಜನಸಮುದಾಯದ ಸಂಸ್ಕೃತಿಯನ್ನು ಸಹೃದಯನ ಸ್ಮೃತಿಪಟಲದ ಮೇಲೆ ತಂದು, ಭವಿಷ್ಯದ ಬದುಕನ್ನು ನೆನಪಿಸಿಕೊಡುತ್ತದೆ.

**ಕಾದಂಬರಿಯ ಕಾಯಕಯೋಗಿಗಳು:**

ಕಾಯಕದ ಮಹತ್ವವನ್ನು ಸಾರುವ ಹರಿದ ಚಪ್ಪಲಿಗಳನ್ನು ರಿಪೇರಿ ಮಾಡುವ ಹನುಮಜ್ಜನ ವಿಷಯದಲ್ಲಿ ಕಾದಂಬರಿಕಾರರು ಹುಲಿಯೂರನ ಪಾತ್ರದ ಮೂಲಕ ಅಂತಃಕರಣದಿಂದ ನೋಡಿದ್ದು ವಿಶೇಷವಾಗಿದೆ. ಪ್ರಾಮಾಣಿಕ ದುಡಿಮೆಯ ಫಲ ಹೊಟ್ಟೆಗೆ ದಕ್ಕುವುದು ಲೋಕರೂಢಿಯ ಮಾತು. ಇದು ಹನುಮಜ್ಜನಿಗೆ ಅನ್ವಯಿಸುತ್ತದೆ. ತಾಂಡದ ಜನರಿಗೆ ಅವನೊಂದಿಗೆ ಇದ್ದ ಸಂಬಂಧ, "ಲೇ ಹನುಮ ಸಂಜಿಕ ಮನಿ ಕಡಿ ಬಾ, ಬಾಡೂಟ ಐತೆ" ಅಂತ ಕರೆದು ಒಪ್ಪತ್ತಿನ ಊಟ ನೀಡುವುದು, "ಹನ್ಮಜ್ಜ ಉಂಡ್ಯಾ" ಅಂತ ಕೇಳುವುದರಲ್ಲಿ ತಿಳಿಯುತ್ತದೆ. ಇವೆಲ್ಲ ಮನುಷ್ಯ ಸಂಸ್ಕೃತಿಯ ಬಂಧಗಳು. ಇಂಥ ಆತಿಥ್ಯವನ್ನು ಪಡೆದುಕೊಂಡ ಹನುಮಜ್ಜ ತನ್ನ ಕಾಯಕವನ್ನು ಅಚ್ಚುಕಟ್ಟಾಗಿ ಮುಗಿಸುತ್ತಿದ್ದ.

ಮೊಂಡರ ಭೀಮಣ್ಣ ಭಿಕ್ಷೆ ಬೇಡಿ ಬದುಕನ್ನು ಕಟ್ಟಿಕೊಂಡ ಹಗಲುವೇಷಗಾರರಲ್ಲಿ ಒಬ್ಬ. ಮೊಂಡರ ಭೀಮಣ್ಣನಿಗೂ ಭದ್ರನಾಯ್ಕನ ತಾಂಡದ ಜನರಿಗೂ ಅವಿನಾಭಾವ ಸಂಬಂಧ. ಸುಗ್ಗಿಯ ಕಾಲ ಬಂತೆಂದರೆ ಮೊಂಡರ ಭೀಮಣ್ಣ ಹಗಲುವೇಷ ಧರಿಸಿ ಭಿಕ್ಷೆಗಾಗಿ ತಾಂಡಕ್ಕೆ ಹಾಜರಾಗುತ್ತಿದ್ದ. ಇವನನ್ನು ಕಂಡವರು ಕೇಳಿದೊಡನೇ ಭಿಕ್ಷೆ ನೀಡಿ ಕಳುಹಿಸಿಕೊಟ್ಟರೆ; ಮತ್ತೆ ಕೆಲವರು ಸತಾಯಿಸಿ ಭಿಕ್ಷೆ ನೀಡುತ್ತಿದ್ದರು. ಇಂಥ ಪ್ರಸಂಗವನ್ನು ಹುಲಿಯೂರ ಬಾಲ್ಯದಿಂದಲೇ ಕಂಡಿದ್ದರಿಂದ ಭೀಮಣ್ಣನ ಅಸಹಾಯಕ ಬದುಕಿನ ಬಗೆಗೆ "ಯಾಕವ್ವ ಭೀಮಣ್ಣ ಭಿಕ್ಷೆ ಬೇಡುತ್ತಾನೆ? ಆತನಿಗೆ ಹೊಲ ಇಲ್ವೇನು?" ಎಂದೆಲ್ಲ ತಾಯಿಗೆ ಕೇಳಿದ್ದ. ಅದಕ್ಕೆ ಜಾನಿಬಾಯಿ "ಮಗ ಈ ದೇಶದೊಳಗೆ ಇಂಥ ಮಂದಿ ಬಹಳ ಅದಾರ. ಜಮೀನಿಲ್ಲ, ಮನಿಯಿಲ್ಲ. ಒಂದು ಲೆಕ್ಕಕ್ಕ ಹೇಳಬೇಕು ಅಂದ್ರ ಅಸ್ತಿತ್ವಾನೇ ಇಲ್ಲ. ಆದರೂ ಭೂಮಿ ಮೇಲೆ ಮನುಷ್ಯ ಆಗಿ ಹುಟ್ಟಿದ ಮೇಲೆ ಬದುಕಲೇ ಬೇಕಲ್ಲ" ಎನ್ನುವ ಒತ್ತಾಯದ ಬದುಕನ್ನು ಕಟ್ಟಿಕೊಂಡ ಭೀಮಣ್ಣನೂ ಒಬ್ಬ ಎಂದಿದಕ್ಕೆ ಹುಲಿಯೂರನ ಮನಸ್ಸಿನಲ್ಲಿ ದುಃಖವುಂಟಾಗುತ್ತದೆ. ಇಂಥ ಜನರ ಪರಿಸ್ಥಿತಿ ಪ್ರಜಾಪ್ರಭುತ್ವದಲ್ಲಿ ನಮ್ಮಿಂದ ಆಯ್ಕೆಯಾದ ಪ್ರತಿನಿಧಿಗಳಿಗೂ, ಸರ್ಕಾರಕ್ಕೂ ಇಲ್ಲವಲ್ಲ ಎಂಬ ಮನೋವೇದನೆಯಾಗುತ್ತದೆ. ಹಾಗಾಗಿ ಸೂಕ್ಷ್ಮ ಸಂವೇದಿ ಮನುಷ್ಯ

ಸಹಜ ಸಂಬಂಧಗಳ ಕುರಿತು ಆಲೋಚಿಸುವ ಹುಲಿಯೂರನಂತಹ ಪಾತ್ರ ಇಲ್ಲಿ ಪ್ರಸ್ತುತವೆನಿಸುತ್ತದೆ.

'ಕುರಿತೋದೆಯುಂ ಕಾವ್ಯಪ್ರಯೋಗ ಪರಿಣತಿಮತಿಗಳ್' ಎಂಬ ಕವಿರಾಜಮಾರ್ಗದ ಮಾತು ವೇಷಗಾರ ರಾಮಣ್ಣನ ವಿದ್ವತ್ತಿನಲ್ಲಿ ಕಾಣಬಹುದು. ಹೊಟ್ಟೆಪಾಡಿಗಾಗಿ ಬದುಕನ್ನು ಕಟ್ಟಿಕೊಳ್ಳಲು ಪ್ರಪಂಚದಲ್ಲಿ ಸಾಕಷ್ಟು ಜನರು ಒಂದಲ್ಲ ಒಂದು ಬಗೆಯ ವೇಷಗಾರ ಆಗುವುದನ್ನು ಕಂಡಿದ್ದೇವೆ. ಮೋಸ, ವಂಚನೆಗಳಿಲ್ಲದೆ ಪ್ರಾಮಾಣಿಕವಾಗಿ ದುಡಿದು ತಿನ್ನುವ ರಾಮಣ್ಣ ಹಗಲುವೇಷ ಧರಿಸಿ ಪ್ರಾಮಾಣಿಕವಾಗಿ ವೃತ್ತಿಯಲ್ಲಿ ನಿರತನಾಗಿರುವುದನ್ನು ಕಾದಂಬರಿಯಲ್ಲಿ ಕಾಣಬಹುದು. ಈತನ ಬದುಕಿಗೆ ಆಧಾರವಾಗಿದ್ದು ರಾಮಾಯಣ, ಮಹಾಭಾರತದ ಕಥೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಹುದುಗಿದ್ದ ಪುರಾಣ, ರಾಮಾಯಣ, ಮಹಾಭಾರತದ ವಸ್ತು ವಿಚಾರಗಳನ್ನು ಕಂದ ಪದ್ಯಗಳ ಮೂಲಕ ಹಾಡುವುದು ಹಾಗೂ ರಾಮ, ಸೀತೆ, ದ್ರೌಪದಿ, ಪಾಂಡವರು, ಕೌರವರ ಪಾತ್ರಗಳ ಪೋಷಾಕುಗಳನ್ನು ಧರಿಸಿ ಜನರಿಗೆ ಮನರಂಜನೆ ನೀಡುವುದು ನಿತ್ಯದ ಕಾಯಕ. ಅದರ ಮುಖೇನ ತಮ್ಮ ಬದುಕಿಗೆ ಬೇಕಾದ ಕಾಳುಕಡಿಯನ್ನು ಸಂಗ್ರಹಿಸಿಕೊಳ್ಳುವುದು ಈತನ ದುಡಿಮೆ.

ಹಡಪದ ಕಾಯಕ ನಿರತ ಚಿಂದ್ರಪ್ಪನ ಪಾತ್ರವು ಭದ್ರನಾಯ್ಕನ ತಾಂಡದ ಜನರೊಂದಿಗೆ ಇದ್ದ ಸಂಬಂಧಗಳ ಬೆಸುಗೆಯನ್ನು ತೋರಿಸಿಕೊಡುತ್ತದೆ. ಲಮಾಣಿಯರು, ಊರಮಂದಿ, ಸಾಬರು, ಕುಂಬಾರ, ಕಮ್ಮಾರ, ಬಡಗಿ ಹೀಗೆ ಎಲ್ಲಾ ಮತದ, ಎಲ್ಲಾ ಜಾತಿಯವರು ಚಿಂದ್ರಪ್ಪನಲ್ಲಿ ಕ್ಷೌರ ಮಾಡಿಸಿಕೊಳ್ಳುತ್ತಿದ್ದರು. ಕ್ಷೌರ ಮಾಡಿಸಿಕೊಂಡವರು ಕಾಸು ಇಲ್ಲದ್ದರಿಂದ ಕಾಳುಕಡಿಗಳನ್ನೇ ಸುಗ್ಗಿಯ ಕಾಲ ಬಂದಾಗ ನೀಡುತ್ತಿದ್ದರು. ಹಜಾಮರನ್ನು ನೋಡಿದ ಕೂಡಲೇ ಕೇಡಾಗುತ್ತೆ ಎನ್ನುವ ಮೂಢನಂಬಿಕೆ ಜನರಲ್ಲಿ ಮನೆ ಮಾಡಿತ್ತು. ಇದರಿಂದ ಬೇಸತ್ತ ಚಿಂದ್ರಪ್ಪನ ಮಗ ಮಂಜ ಮಂದಿಗೆ ಬೈದುಕೊಳ್ಳುತ್ತಿದ್ದ. ಈ ಅವಮಾನಗಳನ್ನು ಸಹಿಸಿಕೊಂಡು, ಕುಟುಂಬದ ಬಂಡಿಯನ್ನು ಸಾಗಿಸುವುದರಲ್ಲೇ ಧ್ಯಾನಸ್ಥನಾಗಿದ್ದ ಚಿಂದ್ರಪ್ಪ. ಊರಿಗೆ ಚಿಂದ್ರಪ್ಪನ ಕಾಯಕ ಅನಿವಾರ್ಯವಾಗಿತ್ತು. ಚಿಂದ್ರಪ್ಪನಿಗೆ ಊರು ಅನಿವಾರ್ಯವೂ ಆಗಿತ್ತು. ಹಾಗಾಗಿ ಅವಮಾನಿಸಿದವರನ್ನು ಎದುರು ಹಾಕಿಕೊಳ್ಳುವ ಧೈರ್ಯವೂ ಮಾಡದೆ ತನ್ನ ಕಾಯಕದಿಂದಲೇ ಬದುಕನ್ನು ಸವೆಸಿದ. ಕ್ಷೌರ ಕಾಯಕದಲ್ಲಿ ಆಧುನಿಕತೆಯ ಗಾಳಿ ಬೀಸತೊಡಗಿತು. ಹಾಗಾಗಿ ಜನರು ಬದಲಾದ ಪರಿಸ್ಥಿತಿಗೆ ತಕ್ಕಂತೆ ಬದಲಾದರು. ''ಅರಕ್ಕೇರದ ಮೂರಕ್ಕಿಳಿಯದ ಬದುಕನ್ನು ಹೆಗಲ ಮೇಲೆ ಹೊತ್ತು'' ಹೊರಟಿರುವ ಚಿಂದ್ರಪ್ಪನ ಅಸಹಾಯಕ ಬದುಕಿನ ಸ್ಥಿತಿ ಕಾದಂಬರಿಯಲ್ಲಿ ದಾಖಲಿಸಿರುವುದು ಓದುಗರಿಗೆ ಮರುಕ ಹುಟ್ಟುತ್ತದೆ.

ಬಡಗಿ ಕಾಯಕದ ಈರಭದ್ರಾಚಾರಿಯ ಬದುಕು ಭದ್ರನಾಯ್ಕನ ತಾಂಡದ ಸೇವಾಭಾಯ ದೇವಸ್ಥಾನದ ಎದುರುಗಡೆ ಬೆಳೆದಿದ್ದ ದೊಡ್ಡ ಬೇವಿನ ಮರದ ಕೆಳಗೆ ಸಾಗುತ್ತಿತ್ತು. ಊರಿನ ಸಣ್ಣಪುಟ್ಟ ರೈತಾಪಿ ವರ್ಗದ ಕೆಲಸಕ್ಕೆ ಬೇಕಾಗುವ ರಂಟೆ, ಕುಂಟೆ, ನೇಗಿಲು, ಕೂರಿಗೆ ಮುಂತಾದ ಕೃಷಿ ಸಲಕರಣೆಗಳನ್ನು ತನ್ನ ಪಾರಂಪರಿಕ ಕುಲಕಸುಬಿನ ಪರಿಣಿತಿಯಲ್ಲಿ ಮಾಡುತ್ತಿದ್ದ. ಇದರಿಂದ ಹೊಟ್ಟೆಗೆ ಬಟ್ಟೆಗೆ ಸ್ವಲ್ಪ ಆದಾಯ ಗಳಿಸಿಕೊಂಡು ಜೀವನ ಸಾಗಿಸಿದ್ದ. ಆಧುನೀಕರಣದಿಂದಾಗಿ ಕೃಷಿ ಸಲಕರಣೆಗಳಲ್ಲಿ ಯಂತ್ರಯುಗ ಕಾಲಿಟ್ಟಿತು. ಇದರಿಂದ ಪಾರಂಪರಿಕ ಬಡಗಿತನದ ಕಸುಬು ಮರೆಯಾಗಿ ಈರಭದ್ರಾಚಾರಿಯ ಕುಟುಂಬ ಕೆಲಸವಿಲ್ಲದೆ, ದುಡಿಮೆಯಿಲ್ಲದೆ ಬದುಕಿನ ದಾರುಣ ಸ್ಥಿತಿಗೆ ತಲುಪಿದ್ದನ್ನು ಕಾದಂಬರಿ ಒಳಗೊಂಡಿದೆ.

ಭದ್ರನಾಯ್ಕನ ತಾಂಡದಲ್ಲಿ ಕುಂಬಾರ ಭೀಮಣ್ಣ ಒಳ್ಳೆಯ ನಂಬಿಗಸ್ಥ ವ್ಯಕ್ತಿ. ಸುತ್ತಮುತ್ತಲಿನ ಹಳ್ಳಿಯವರು ಭೀಮಣ್ಣನ ಗುಣ ಸಂಪನ್ನತೆಯನ್ನು ಕೊಂಡಾಡುತ್ತಿದ್ದರು. ವಿಶ್ವಾಸ, ನಂಬಿಗಸ್ಥ, ಶ್ರಮಜೀವಿ, ಮಾನವ ಅಂತಃಕರಣವುಳ್ಳವನು ಎನ್ನುವಂಥ ಮಾತುಗಳು ಕೇಳಿಬರುತ್ತಿದ್ದವು. ಯಾರನ್ನೂ ತೆಗಳದೆ ತಾನಾಯ್ತು ತನ್ನ ಕೆಲಸವಾಯ್ತು ಎನ್ನುವಷ್ಟರ ಮಟ್ಟಿಗೆ ತಾಂಡದ ಜನರ ಪ್ರೀತಿ ಗಳಿಸಿಕೊಂಡಿದ್ದ. ಇವೆಲ್ಲ ಭೀಮಣ್ಣನ ಕಾಯಕದ ಆದರ್ಶದಿಂದ ಲಭಿಸಿದ್ದ ಪುರಸ್ಕಾರಗಳು. ಕುಂಬಾರ ಭೀಮಣ್ಣನ ಮಡಿಕೆಗೂ ಲಮಾಣಿಯರ ಮದುವೆ ಶಾಸ್ತ್ರಕ್ಕೂ ಒಂದು ಬಿಡಿಸಲಾರದ ನಂಟಿದೆ. ಮಡಿಕೆಕುಡಿಕೆ ಇಲ್ಲದೆ ಲಮಾಣಿ ಜನರ ಮದುವೆ ಪೂರ್ಣಗೊಳ್ಳುವುದಿಲ್ಲ. ಅಲ್ಯೂಮಿನಿಯಂ, ಸ್ಟೀಲ್ ಪಾತ್ರೆಗಳು ಪಾರಂಪರಿಕ ಮಣ್ಣಿನ ಮಡಿಕೆಗಳ ಜಾಗವನ್ನು ಆಕ್ರಮಿಸಿಕೊಂಡಿದ್ದರೂ ಮದುವೆ ಶಾಸ್ತ್ರಕ್ಕೆ ಬೇಕಾದ ಮಡಿಕೆಗಳನ್ನು ಕುಂಬಾರನಿಂದ ಖರೀದಿಸಿ ಮದುವೆ ಕಾರ್ಯ ಸಂಪನ್ನಗೊಳಿಸುವುದು ಈಗಲೂ ನಡೆದಿದೆ. ಆದರೆ, ಆಧುನೀಕರಣದಿಂದಾಗಿ ದಿನನಿತ್ಯದ ಬಳಕೆಗೆ ಮಡಿಕೆ ಪಾತ್ರೆಗಳ ಜಾಗದಲ್ಲಿ ಅಲ್ಯೂಮಿನಿಯಂ, ಸ್ಟೀಲ್, ಪ್ಲಾಸ್ಟಿಕ್ ಪಾತ್ರೆಗಳು ಪ್ರವೇಶಪಡೆದುಕೊಂಡು ಕುಂಬಾರ ವೃತ್ತಿ ಮರೆಯಾಗುತ್ತಿರುವುದು ಕಾದಂಬರಿಕಾರರ ಕಳವಳಕ್ಕೆ ಕಾರಣವಾಗಿದೆ.

ಗಫೂರ್ ಸಾಬ್ ಭದ್ರನಾಯ್ಕನ ತಾಂಡದೊಂದಿಗೆ ತನ್ನ ಕಾಯಕ 'ಕೋಡು ಕತ್ತರಿಸು ಎಮ್ಮೆ ಬೋಳಿಸು' ಮೂಲಕ ಹೆಸರಾಗಿದ್ದ. ಮನುಷ್ಯನ ಬದುಕಿಗೆ ಕಾಯಕ ಯಾವುದಾದರೇನು? ಪ್ರಾಮಾಣಿಕ ದುಡಿಮೆ ಮುಖ್ಯ. ಇಂತಹ ದುಡಿಮೆಗೆ ಹಗಲುಇರುಳು ಊರಿಂದ ಊರಿಗೆ ಸುತ್ತಾಡಿ ಕುಟುಂಬ ನಿರ್ವಹಣೆ ಮಾಡುವ ಜವಾಬ್ದಾರಿ ಗಫೂರ್ ಸಾಬ್‌ನದು. "ತೆಳ್ಳಗೆ, ಉದ್ದಕ್ಕೆ, ಕುರುಚಲು ಗಡ್ಡ, ಕೊಳಕು ಬಟ್ಟೆ, ಬಗಲಾಗೆ ಚರ್ಮದ ಚೀಲ" ಹಾಕಿಕೊಂಡು ವಿಚಿತ್ರವಾಗಿ ಕಾಣಿಸಿಕೊಂಡಿದ್ದರೂ ಕಾಯಕದಲ್ಲಿ ಪರಿಶುದ್ಧನಾಗಿದ್ದ. ಈತನ ಕಾಯಕ ಮನುಷ್ಯನಂತೆ ಪ್ರಾಣಿಗಳಿಗೂ ಒಂದು ಬದುಕಿದೆ ಎಂಬುದನ್ನು ತಿಳಿಸಿಕೊಡುತ್ತದೆ. ಕಾದಂಬರಿಯಲ್ಲಿ ಹುಲಿಯೂರನ

ಪಾತ್ರದ ಮೂಲಕ ಪ್ರಾಣಿಗಳ ಬದುಕನ್ನು ಕಟ್ಟಿಕೊಟ್ಟಿರುವುದು ವಿಶೇಷವಾಗಿದೆ. ''ನಮ್ಮ ತಲೆಯೊಳಗೆ ಹೇನು ಸೀರು ಆದ್ರೆ ಹೆಂಗೆ ಪರಪರ ಕರ್ಕೊಂತಿವೋ; ಪ್ರಾಣಿಗಳಿಗೆ ದೇವರು ಆ ಭಾಗ್ಯ ಕೊಟ್ಟಿಲ್ಲ'' ಎನ್ನುವ ಮಾತಿನಲ್ಲಿ ಪ್ರಾಣಿಗಳ ಬದುಕಿನ ಬಗೆಗೆ ಕಾದಂಬರಿಕಾರರಿಗೆ ಇರುವ ಸಂವೇದನಾಶೀಲತೆಯ ಗುಣ ಕಾಣಿಸಿಕೊಳ್ಳುತ್ತದೆ. ಅದಕ್ಕಾಗಿಯೇ ದೇವರು ಗಫೂರ್ ಸಾಬಿ ಮೂಲಕ ಇಂತಹ ಕಾಯಕ ಮಾಡಿಸಿ, ಪ್ರಾಣಿಗಳ ಬದುಕಿಗೆ ಸಹಕರಿಸಿದ್ದಾನೆಂದು ಕಾದಂಬರಿಕಾರರು ಭಾವಿಸುತ್ತಾರೆ.

''ನಾಳೆ ಬರುವುದು ನಮಗೀಗಲೇ ಬರಲಿ, ಅದಕಾರಂಜುವರು ಅದಕಾರಳುಕುವರು'' ಎನ್ನುವ ಅಕ್ಕಮಹಾದೇವಿಯ ಧೈರ್ಯದ ಮಾತು ಕಾದಂಬರಿಯಲ್ಲಿ ಕಾಯಕಜೀವಿಗಳಿಗೆ ಅನ್ವಯಿಸುತ್ತದೆ. ಶ್ರಮ ಸಂಸ್ಕೃತಿಯ ಸ್ಥಾಪನೆಯೇ ಮೂಲ ಉದ್ದೇಶವಾಗಿರುವಾಗ ಬೇರಾವದನ್ನೂ ಆಸೆ ಪಡದೆ ''ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ?'' ಎನ್ನುವಂತೆ ವಾಸ್ತವ ಬದುಕಿಗೆ ಹೋರಾಡಿರುವುದು ಕಂಡುಬರುತ್ತದೆ. ಕಾಯಕದಿಂದ ಫಲಿಸಿದ ಫಲ ಈ ವರ್ಗಕ್ಕೆ ಸಂತೃಪ್ತಿ ಕೊಟ್ಟಿದೆ. ಕಾಯಕದೊಳು ನಿರತರಾಗಿರಲು ಗುರು, ಲಿಂಗ, ಜಂಗಮದ ಹಂಗು ಹರಿಯಬೇಕು ಎನ್ನುವ ಶರಣರ ನುಡಿ ಕಾದಂಬರಿಯ ಶ್ರಮಿಕ ವರ್ಗಕ್ಕೆ ಸಲ್ಲುತ್ತದೆ. ಆದ್ದರಿಂದ ಭದ್ರನಾಯ್ಕನ ತಾಂಡ, ಕುಂಬಾರ, ಕಮ್ಮಾರ, ಬಡಿಗ, ಹಡಪದ, ಮುಸಲ್ಮಾನ ಮುಂತಾದ ಸಮುದಾಯದ ಕಾಯಕಕ್ಕೆ ಸಹಕರಿಸಿದೆ. ಕಾಯಕದ ಜೊತೆಗೆ ಸುಖದುಃಖಗಳನ್ನು ವಿನಿಮಯ ಮಾಡಿಕೊಂಡಿದೆ. ಬದುಕುಬವಣೆಗಳ ಕುರಿತಾದ ಜೀವನ ವಿಧಾನವನ್ನು ಹಂಚಿಕೊಂಡಿದೆ. ಸಾಂಪ್ರದಾಯಿಕ ಕುಲಕಸುಬಿಗೆ ಜಾಗತೀಕರಣ ಕೊಟ್ಟಂತಹ ಹೊಡೆತಗಳಿಗೆ ಬಾಗಿ, ಬಳುಕಿದ ಘಟನೆಗಳನ್ನೂ ಜೀವಂತವಾಗಿ ಚಿತ್ರಿಸಿದೆ. ಬದುಕಿಗೆ ಆಸರೆಯಾಗಿದ್ದ ಕುಲಕಸುಬು ಆಧುನೀಕರಣಕ್ಕೆ ಎದೆಗುಂದದೆ ಮತ್ತೆ ಉಳಿಸಿಕೊಳ್ಳುವ ಧಾವಂತದಲ್ಲಿದ್ದ ಕಾಯಕ ಜೀವಿಗಳನ್ನು ಪರಿಚಯಿಸಿಕೊಟ್ಟಿದೆ. ಹೀಗಾಗಿ ಶಾಂತನಾಯ್ಕರ 'ತಾಂಡ' ಕಾದಂಬರಿ ಕೇವಲ ಲಂಬಾಣಿ ಸಂಸ್ಕೃತಿ ಮತ್ತು ಸಮುದಾಯಕ್ಕೆ ಮಾತ್ರ ಸೀಮಿತವಾಗಿರದೆ ಬಹುತ್ವದ ಕಡೆ ಸಾಗುತ್ತದೆ. ವಿಭಿನ್ನ ಕುಲಕಸುಬಿನ ಸಂಸ್ಕೃತಿಗಳನ್ನು ಪರಿಚಯಿಸಿಕೊಡುತ್ತಾ 'ಕಾಯಕವೇ ಕೈಲಾಸ' ಎಂಬುದನ್ನು ಪ್ರಾಮಾಣಿಕವಾಗಿ ಹಿಡಿದಿಟ್ಟಿದೆ. ಕಾಯಕ ಜೀವಿಗಳಿಗೆ ಭೂತದ ಬದುಕಿನೊಂದಿಗೆ ಭವಿಷ್ಯದ ಬದುಕನ್ನು ತೋರಿಸಿಕೊಟ್ಟಿದೆ. ಕುಟುಂಬ ನಿರ್ವಹಣೆಯ ಮನೋಧೋರಣೆಗಳನ್ನು ಕಟ್ಟಿಕೊಟ್ಟಿದೆ. ಹಾಗಾಗಿ 'ತಾಂಡ' ಕಾದಂಬರಿ ಎಲ್ಲ ಕಾಲಕ್ಕೂ ಪ್ರಸ್ತುತವಾಗುತ್ತದೆ. ಎಲ್ಲ ಸಮುದಾಯಕ್ಕೂ ಉತ್ತಮ ವಿಚಾರಗಳನ್ನು, ಜೀವನ ಮೌಲ್ಯಗಳನ್ನು ಉಣಬಡಿಸುತ್ತದೆ ಎಂಬುದರಲ್ಲಿ ಸಂಶಯವೇ ಇಲ್ಲ.

## ಆಕರ ಕೃತಿ:

1. ಶಿರಗಾನಹಳ್ಳಿ ಶಾಂತನಾಯ್ಕ, (2021), ತಾಂಡ, ಪ್ರಗತಿ ಪ್ರಕಾಶನ, ಮೈಸೂರು.

## ಪರಾಮರ್ಶನ ಗ್ರಂಥಗಳು:

1. ರಾಠೋಡ್ ಪಿ.ಕೆ., (2015), ಬಂಜಾರ ಸಂಸ್ಕೃತಿ ಕಥನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
2. ಹರಿಲಾಲ್ ಪವಾರ್, (2017), ಬಂಜಾರ ಭಾಷೆ ತೌಲನಿಕ ಅಧ್ಯಯನ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೋಟಗುಡಿ.
3. ನಾಯಕ ಡಿ.ಬಿ. (ಸಂ), (2021), ಲಂಬಾಣಿ ಸಾಂಸ್ಕೃತಿಕ ಪದಕೋಶ: ಸಂಪುಟ–17, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೋಟಗುಡಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.